**ಓ ಎಸ್ ನಂ. 46/2024**
**ಡಿ ಡಬ್ಲ್ಯೂಃ 03**

**ದಿಃ 27-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಎಂ ಎಸ್ ಡಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸರಿಯಾಗಿದ್ದು, ಸತ್ಯವಾಗಿರುತ್ತವೆ.

**ಪಾಟೀ ಸವಾಲುಃ ಶ್ರೀ ಎಸ್ ಆರ್ ಎಚ್ ವಕೀಲರಿಂದಃ**

ವಾದಿಯರು ಹಾಗೂ ಪ್ರತಿವಾದಿಯರು ನನ್ನ ಸಂಬಂಧಿಕರು. ನಾನು ಕೆಂಚಪ್ಪನಿಗೆ ಮಗಳನ್ನು ಕೊಟ್ಟಿದ್ದೇನೆ. ನಾನು ಹಿರಿತನ ಮಾಡಲು ಹೋಗಿರಲಿಲ್ಲ ಆದರೆ ಹಿರಿಯರ ಸಮಕ್ಷಮ ಮುಗಿದಿರುತ್ತದೆ. ಮಾತುಕತೆಯಲ್ಲಿ ಮುಗಿದು ಹೋದ ಬಗ್ಗೆ 3ನೇ ಪ್ರತಿವಾದಿ ನನಗೆ ತಿಳಿಸಿದ್ದಾನೆ. ಆ ಸಮಯದಲ್ಲಿ ನನ್ನನ್ನು ಕೂಡಾ ಕರೆದುಕೊಂಡು ಹೋಗಿದ್ದ. ಹಿರಿತನ ಮಾಡುವಾಗ ನಾನು ಹಾಜರಿದ್ದೆ. ಆ ಸಮಯದಲ್ಲಿ ಯಾವುದೆ ಬರವಣಿಗೆ ಆಗಿರುವುದಿಲ್ಲ. ಮಾತುಕತೆ ಸಮಯದಲ್ಲಿ 4 ತೊಲೆ ಬಂಗಾರ ಹಾಗೂ ಹಣ ಕೊಟ್ಟಿದ್ದರು ಈ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ. ವಾದಿಯರಿಗೆ ಹಣ ಹಾಗೂ ಬಂಗಾರ ಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 3ನೇ ಪ್ರತಿವಾದಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.